ಸಾಕ್ಷಿ ಯನ್ನು ದಿಃ 18.10.2025 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ  ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದ**

1. ನನಗೆ ಸ್ವಂತ ಮನೆ. ಅದನ್ನು ನೀವು ಸಾಲ ಮಾಡಿ ಖರೀದಿ ಮಾಡಿದ್ದೀರಾ ಎಂದರೆ, ಇಲ್ಲ.
2. ನಮ್ಮ ಮನೆಯಲ್ಲಿ ನನ್ನ ತಾಯಿ, ನನ್ನ ಪತ್ನಿ ಹಾಗೂ ಇಬ್ಬರು ಮಕ್ಕಳು ಇದ್ದಾರೆ.
3. ನನ್ನ ಕುಟುಂಬದ ಖರ್ಚು ನನ್ನ ಆದಾಯದಿಂದ ನಡೆಯುತ್ತದೆ ಎಂದರೆ ಸರಿ.
4. ನಿಪಿ-6 ರ ಬ್ಯಾಂಕ್ ಸ್ಟೇಟ್ಮೆಂಟ್ ನ್ನು ನನ್ನ ವ್ಯವಹಾರನ್ನು ತೋರಿಸಲು ಹಾಜರುಡಿಪಸಿದ್ದೇನೆ.
5. ನಿಪಿ-6 ರಲ್ಲಿ ಜುಲೈ ತಿಂಗಳಲ್ಲಿ ನಿಮಗೆ ಯಾವುದೇ ಆದಾಯ ಕಂಡು ಬಂದಿಲ್ಲ ಎಂದರೆ ಸರಿಯಲ್ಲ.
6. ನಿಪಿ - 6 ರಲ್ಲಿ ನಿಮಗೆ 15 ಲಕ್ಷ ಆದಾಯ ಇರುವುದು ಕಂಡು ಬರುವುದಿಲ್ಲ ಎಂದರೆ, ಇದೆ. ಆ ರೀತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
7. ನಿಪಿ - 7 ರಿಂದ 18ರ ವಾಹನಗಳ ದಾಖಲೆಗಳನ್ನು ಯಾವ ಉದ್ದೇಶಕ್ಕೆ ಹಾಜರು ಮಾಡಿದ್ದೀರಾ ಎಂದರೆ, ಆದಾಯವನ್ನು ತೋರಿಸಲು ಎಂದು ನುಡಿಯುತ್ತಾರೆ.
8. ನಿಪಿ - 7 ರಿಂದ 18ರ ವಾಹನಗಳನ್ನು ಸಾಲ ಮಾಡಿ ಖರೀದಿ ಮಾಡಿದ್ದೀರಾ ಎಂದರೆ ಸರಿಯಲ್ಲ. ಸದರಿ ವಾಹನಗಳನ್ನು ಸಾಲ ಇಲ್ಲದೇ ಖರೀದಿ ಮಾಡುವ ಸಾಮರ್ಥ್ಯ ನಿಮಗೆ ಇಲ್ಲ ಎಂದರೆ ಸರಿಯಲ್ಲ.

9. ನಿಪಿ - 19 ರಲ್ಲಿ ದಿಃ 15.04.2024 ರಂದು 83 ಸಾವಿರದ 300 ವಾಹನ ಸಾಲ ಕಟ್ಟಿದ್ದೀರಾ ಎಂದರೆ, ಅದು ಎಕ್ಸ್.ಯು.ವಿ 700 ಕಾರಿಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ.
10. ದಿಃ 19.04.2024 ರಂದು ವಾಹನಗಳ ಸಾಲ 1 ಲಕ್ಷ 35 ಸಾವಿರದ 400 ಕಟ್ಟಿದ್ದೀರಾ ಎಂದರೆ ಸರಿ. ನಿಖರವಾಗಿ ಯಾವ ವಾಹನಕ್ಕೆ ಎಂದು ಹೇಳಲು ಆಗುವುದಿಲ್ಲ.
11. ನೀವು ವಾಹನಗಳ ಮೇಲೆ ಸಾಲ ಪಡೆದು ಖರೀದಿ ಮಾಡಿದ್ದೀರಾ ಎಂದರೆ, ಕಾರಿಗೆ ಮಾತ್ರ ಸಾಲ ಮಾಡಿದ್ದೇನೆ ಎಂದು ನುಡಿಯುತ್ತಾರೆ.
12. ನಿಪಿ - 19 ರ ದಾಖಲೆಯಲ್ಲಿ ಆರೋಪಿಗೆ 15 ಲಕ್ಷ ನೀಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ.
13. ನಿಪಿ - 20 ರಲ್ಲಿ ದಿಃ 12.07.2024 ರಂದು 1 ಲಕ್ಷ 88 ಸಾವಿರ ವಾಹನ ಸಾಲ ಕಟ್ಟಿದ್ದೀರಾ ಎಂದರೆ, ಸರಿಯಲ್ಲ.
14. ನಿಪಿ - 20 ರಲ್ಲಿ ವೆಂಕಟೇಶ್ವರ ಕೋಳಿ ಕಂಪನಿಗೆ ಹಣ ನೀಡಲಾಗಿದೆ ಎಂದರೆ ಸರಿ.
15. ನಿಪಿ - 20 ರ ಪ್ರಕಾರ ನಿಮಗೆ ಬಂದಿರುವುದು 47 ಲಕ್ಷ 48 ಸಾವಿರದ 577 ಎಂದರೆ ಸರಿ. ಅದರಲ್ಲಿ ನೀವು ಹಣ ಪಡೆದಿರುವುದು 60 ಲಕ್ಷ ಆಗಿದ್ದು ನಿಮಗೆ ಆ ವರ್ಷದಲ್ಲಿ 13 ಲಕ್ಷ ನಷ್ಟ ಇತ್ತು ಎಂದರೆ ಸರಿಯಲ್ಲ.
16. ನಿಪಿ - 20 ರ ಖಾತೆ ಚಾಲ್ತಿ ಖಾತೆ ಮತ್ತು ಓವರ್ ಡ್ರಾಫ್ಟ್ ಖಾತೆ ಆಗಿದೆ.
17. ಓವರ್ ಡ್ರಾಫ್ಟ್‌ಗಾಗಿ ಮನೆಯನ್ನು ಭದ್ರತೆಗಾಗಿ ನೀಡಿದ್ದೇನೆ.
18. ಓವರ್ ಡ್ರಾಫ್ಟ್ ಮುಖಾಂತರ ಕೋಳಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿ.
19. ದಿಃ 14.05.2024 ರಂದು ವಾಹನದ ಸಾಲ 2 ಲಕ್ಷ 28 ಸಾವಿರ 835 ಕಟ್ಟಲಾಗಿದೆ ಎಂದರೆ, ವಾಹನ ಖರೀದಿಗಾಗಿ ಪಡೆದಿದ್ದೇನೆ ಎಂದು ನುಡಿಯುತ್ತಾರೆ.
20. ದಿಃ 28.05.2024 ರಂದು 2 ಲಕ್ಷ 24 ಸಾವಿರ 900 ವಾಹನ ಸಾಲ ಕಟ್ಟಲಾಗಿದೆ ಎಂದರೆ, ಅದು ವಾಹನ ಸಾಲ ಅಲ್ಲ.
21. ನಿಪಿ - 19, 20 ಮತ್ತು 21 ರಲ್ಲಿ ತೋರಿಸಿದ ವಾಹನ ಸಾಲಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ, ಯಾವುದೇ ಸಾಲ ಇಲ್ಲ ಎಂದು ನುಡಿಯುತ್ತಾರೆ.
22. ವಾಹನ ಸಾಲ ಎಂದು ನಮೂದಾಗಿರುವುದು ಯಾವುದರ ಸಂಬಂಧ ಎಂದರೆ, ಕಾರ್ ಸಾಲ ಎಂದು ನುಡಿಯುತ್ತಾರೆ.
23. ನಿಪಿ - 22 ರಲ್ಲಿ ವಾಹನ ಸಾಲ ಎಂದು 4 ಲಕ್ಷ 66 ಸಾವಿರ ಎಂದು ಇದೆ ಎಂದರೆ, ಅದು ಖರೀದಿ ಮಾಡಿರುವುದು ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಬಹುದು ಎಂದರೆ ಸರಿ.

24. ನಾನು ಕೋಳಿ ಖರೀದಿ ಮಾಡುತ್ತೇನೆ ಮತ್ತು ಸಾಕುತ್ತೇನೆ.
25. ಕೋಳಿ ಸಾಕಣೆ ಮತ್ತು ಮಾರಾಟಕ್ಕೆ ನನಗೆ ಪರವಾನಿಗೆ ಇದೆ. ಅದನ್ನು ಹಾಜರಪುಡಿಸಬಹುದು ಎಂದರೆ ಸರಿ.
26. ಕೋಳಿಗಳನ್ನು ನಾನು ವೆಂಕಟೇಶ್ವರ, ಸುಗುಣ ಕಂಪಣಿಗಳಿಂದ ಖರೀದಿ ಮಾಡುತ್ತೇನೆ.
27. ನಿಪಿ - 23 ರಲ್ಲಿ ನಿಮ್ಮ ಒಟ್ಟು ಆದಾಯ 15 ಲಕ್ಷದ 74 ಸಾವಿರದ 360 ಎಂದರೆ, ಇನ್ನೂ ಹೆಚ್ಚಿಗೆ ಇದೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಬಹುದು ಎಂದರೆ ಸರಿ.
28. ನಿಪಿ-23 ನ್ನು ದಿಃ 27.04.2024 ರಂದು ಎಂದರೆ ಸರಿ. ಅದನ್ನು ಈ ಪ್ರಕರಣದ ದಾಖಲಾದ ಮೇಲೆ ಸಲ್ಲಿಸಿದ್ದೀರಾ ಎಂದರೆ ಸರಿ.
29. ನೀವು ಹಾಜರುಪಡಿಸಿದ ನಿಪಿ - 24 ದಾಖಲೆ ಪ್ರಕಾರ ನಿಮ್ಮ ಆದಾಯ 15 ಲಕ್ಷದ 74 ಸಾವಿರದ 360 ಎಂದರೆ ಸರಿ.
30. ನಿಪಿ-24 ನ್ನು ಸಲ್ಲಿಕೆ ಮಾಡಿರುವುದು ದಿಃ 27.04.2024 ರಂದು ಎಂದರೆ ಸರಿ.
31. ನಿಪಿ - 25 ರಲ್ಲಿ ನಿಮ್ಮ ಆ ವರ್ಷದ ಲಾಭಾಂಶ 15 ಲಕ್ಷ 66 ಸಾವಿರದ 953 ಎಂದರೆ ಸರಿ.
32. ನಿಪಿ -25 ನ್ನು ದಿಃ 30.09.2024 ರಂದು ಮಾಡಲಾದೆ ಎಂದರೆ ಸರಿ.
33. ನಿಪಿ -26 ರ ಪ್ರಕಾರ ಮಾರ್ಚ್ 2024 ರಂದು ನಿಮ್ಮ ಕೈಯಲ್ಲಿ ನಗದು 3 ಲಕ್ಷ 56 ಸಾವಿರ 800 ರೂಪಾಯಿ ಎಂದರೆ, ಸರಿ. ಅದನ್ನು ದಿಃ 30.09.2024 ರಂದು ಮಾಡಲಾದೆ ಎಂದರೆ ಸರಿ.
34. ನಿಪಿ - 27 ರ ಪ್ರಕಾರ ನಗದು ಹಣ ಹಾಗೂ ನಿಮ್ಮ ಆದಾಯ ಸೇರಿ 15 ಲಕ್ಷ 66 ಸಾವಿರದ 953 ಎಂದರೆ ಸರಿ.
35. ನೀವು ಹಾಜರುಪಡಿಸಿದ ನಿಪಿ- 24 ರಿಂದ 27 ರಲ್ಲಿ ಆರೋಪಿಗೆ ಹಣ ನೀಡಿರುವುದು ನಮೂದು ಇಲ್ಲ ಎಂದರೆ ಸರಿ.
36. ಕೋಳಿ ಸಾಕಣೆ ಮಾಡುವುದು ನನ್ನ ಸ್ವಂತ ಕಟ್ಟಡದಲ್ಲಿ. ಆ ಬಗ್ಗೆ ದಾಖಲೆ ಹಾಜರುಪಡಿಸಬಹುದು ಎಂದರೆ ಸರಿ. ಕೊಳಿ ಮಾರಾಟ ಮಾಡುವುದು ಬಾಡಿಗೆ ಕಟ್ಟಡದಲ್ಲಿ. ಅದಕ್ಕೆ ತಿಂಗಳಿಗೆ 15 ಸಾವಿರ ಬಾಡಿಗೆ ಕಟ್ಟುತ್ತೇನೆ. ಅದನ್ನು ಮೇಲೆ ಹೇಳಿದ ಆದಾಯದಿಂದ ನೀಡಬೇಕು ಎಂದರೆ ಸರಿ.
37. ಸುನೀತ ಟಿ.ಪಿ ಎಂದರೆ ನನ್ನ ಪತ್ನಿ, ಅವರು ನನಗೆ ಹಣ ನೀಡಿದ್ದಾರೆ. ಅದರ ದಿನಾಂಕ ನನಗೆ ಗೊತ್ತಿಲ್ಲ.
38. ನಿಪಿ - 26 ರಲ್ಲಿ ನೀವು ಸಾಲ ನೀಡಿದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ.

39. ನೀವು ಸಾಲ ನೀಡಿದ್ದರೆ ನಿಪಿ - 26ರಲ್ಲಿ ಕಂಡು ಬರುತ್ತಿತ್ತು ಎಂದರೆ, ಖಾತೆ ಮೂಲಕ ನೀಡಿದರೆ ಬರುತ್ತದೆ, ನಗದು ಮೂಲಕ ನೀಡಿದರೆ ಬರುವುದಿಲ್ಲ ಎಂದು ನುಡಿಯುತ್ತಾರೆ.
40. 15 ಲಕ್ಷ ಸಾಲವನ್ನು ನಗದು ಮೂಲಕ ನೀಡಿದ ಬಗ್ಗೆ ಆಡಿಟ್ ದಾಖಲೆಯನ್ನು ನೀಡಿಲ್ಲ.
41. ನಿಪಿ - 26ರಲ್ಲಿ ಐಸಿಐಸಿ ಬ್ಯಾಂಕ್ ಓ.ಡಿ ಸಾಲ 93 ಲಕ್ಷ ಇದೆ ಎಂದರೆ ಸರಿ.
42. ಹೆಚ್.ಡಿ.ಎಫ್.ಸಿ ಬ್ಯಾಂಕ್ ವಾಹನ ಸಾಲ 4 ಲಕ್ಷ 93 ಸಾವಿರ ಇದೆ ಎಂದರೆ ಸರಿ.
43. ಹೆಚ್.ಡಿ.ಎಫ್.ಸಿ ಬೊಲೇರೋ ಪಿಕ್ ಅಪ್ ವಾಹನ ಸಾಲ 9 ಲಕ್ಷ 159 ಸಾವಿರ ಇದೆ ಎಂದರೆ, ಅದು ಕ್ಲಿಯರ್ ಆಗಿದೆ.
44. ಐಸಿಐಸಿ ಬ್ಯಾಂಕ್ ಬ್ಯಾಂಕ್ ಸಾಲ 13 ಲಕ್ಷ 38 ಸಾವಿರ 93 ಇದೆ ಎಂದರೆ, ಅದು ಕ್ಲಿಯರ್ ಆಗಿದೆ.
45. ಹೆಚ್.ಡಿ.ಎಫ್.ಸಿ ಬ್ಯಾಂಕ್ ನಲ್ಲಿ 19 ಲಕ್ಷ 42 ಸಾವಿರ 690 ಸಾಲ ಇದೆ ಎಂದರೆ, ಕಾರ್ ಸಾಲ ಇದೆ.
46. ಸದರಿ ಸಾಲಗಳು ಬಗ್ಗೆ ಬ್ಯಾಂಕ್ ಸ್ಟೇಟ್ಮೆಂಟ್ ನಲ್ಲಿ ಕಂಡು ಬರುತ್ತದೆ ಎಂದರೆ ಸರಿ. ಸಾಲ ತೀರಿದ ಬಗ್ಗೆ ದಾಖಲೆ ಹಾಜರುಪಡಿಸಬಹುದು ಎಂದರೆ ಸರಿ.
47. ನಿಪಿ - 6 ರಿಂದ 27ರ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.
48. ದೂರಿನಲ್ಲಿ ಹೇಳಿದಂತೆ ದಿಃ 01.07.2024 ರಂದು ನೀವು ಆರೋಪಿಗೆ ಯಾವುದೇ ಹಣ ಸಾಲವಾಗಿ ನೀಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.
49. ಆರೋಪಿಗೆ 15 ಲಕ್ಷ ಸಾಲ ನೀಡುವ ಆರ್ಥಿಕ ಸಾಮರ್ಥ್ಯ ನಿಮಗೆ ಇಲ್ಲ ಎಂದರೆ ಸರಿಯಲ್ಲ.
50. ಆರೋಪಿ ನಿಮಗೆ ವೈಯಕ್ತಿಕವಾಗಿ ಪರಿಚಯ ಇಲ್ಲದಿದ್ದರೂ ಅವರು ಪರಿಚಯ ಇದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
51. ಆರೋಪಿಯನ್ನು ವೆಂಕಟೇಶ ರವರು ಪರಿಚಯ ಮಾಡಿಸಿ ಸಾಲ ಕೊಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
52. ಮನೆ ಖರೀದಿಗಾಗಿ ನಿಮ್ಮಿಂದ 15 ಲಕ್ಷ ಸಾಲ ಪಡೆದುಕೊಂಡರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
53. ನಿಪಿ - 23 ರಿಂದ 28ರ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಠಿ ಮಾಡಿ ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

54. ನಿಮ್ಮ ಮತ್ತು ಆರೋಪಿ ನಡುವೆ ಯಾವುದೇ ಪರಿಚಯ ಇಲ್ಲ ಹಾಗೂ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.

55. ಆರೋಪಿ ಮತ್ತು ವೆಂಕಟೇಶ ರವರು ಆರ್.ವಿ ಎಂಟರ್ ಪ್ರೈಸಸ್ ಎಂಬ ಹೆಸರಿನಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ.

56. ಸದರಿ ವ್ಯವಹಾರ ನಡೆಸುವ ಸಮಯದಲ್ಲಿ ವೆಂಕಟೇಶ್ವರ ರವರ ತಾಯಿ ಶ್ರೀಮತಿ ರವರು 9 ಲಕ್ಷ ಹಣ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ವೆಂಕಟೇಶ್ವರ ರವರ ತಾಯಿ ಶ್ರೀಮತಿ ರವರ ಪರಿಚಯ ಇದೆ.

57. ಸದರಿ 9 ಲಕ್ಷ ಹೂಡಿಕೆ ಮಾಡುವ ಸಮಯದಲ್ಲಿ ಶ್ರೀಮತಿ ಯವರು ನಿಪಿ - 1 ರ ಖಾಲಿ ಚೆಕ್ ಪಡೆದುಕೊಂಡು ನಿಮ್ಮ ಮೂಲಕ ಸುಳ್ಳು ದೂರನ್ನು ಹಾಕಿಸಿದ್ದಾರೆ ಎಂದರೆ ಸರಿಯಲ್ಲ.

58. ಸದರಿ 9 ಲಕ್ಷ ಹಣವನ್ನು ದಿಃ 29.06.2020 ರಂದು ಶ್ರೀಮತಿ ರವರ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

59. ದಿಃ 17.01.2022 ರಂದು ಆರ್.ವಿ ಎಂಟರ್ಪ್ರೈಸಸ್ ಪುನಸ್ಥಾಪನೆಯಾಗಿ ಅದರಿಂದ ವೆಂಕಟೇಶರವರು ಹೊರಗೆ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

60. ನಂತರ ನೀವು, ವೆಂಕಟೇಶ ಹಾಗೂ ಅವರ ತಾಯಿ ಶಾಮೀಲಾಗಿ ಹಳೆಯ ಖಾಲಿ ಚೆಕ್ಕನ್ನು ಭರ್ತಿ ಮಾಡಿಕೊಂಡು ಈ ಸುಳ್ಳು ದೂರು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

61. ಆ ಬಗ್ಗೆ ದಿಃ 29.08.2024 ರಂದು ಆರೋಪಿಯು ನಿಮ್ಮ ಮೇಲೆ ಹಾಗೂ ವೆಂಕಟೇಶ ಮತ್ತು ಅವರ ತಾಯಿ ಮೇಲೆ ಸುರತ್ಕಲ್ ಠಾಣೆಯಲ್ಲಿ ಪೊಲೀಸ್ ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

62. ನಂತರ ನಿಮ್ಮ, ವೆಂಕಟೇಶ ಹಾಗೂ ಅವರ ತಾಯಿಯ ಮೇಲೆ ಖಾಸಗಿ ಪಿರ್ಯಾಧಿಯನ್ನು ಮಂಗಳೂರಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

63. ಆ ಬಗ್ಗೆ ನಿಮ್ಮ ಮೇಲೆ ಪ್ರ.ವ.ವರದಿ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನಿಮಗೆ ಪೊಲೀಸ್ ಠಾಣೆಯಿಂದ ನೊಟೀಸು ಸಹ ಬಂದಿದೆ ಎಂದರೆ, ಅದಕ್ಕೆ ನಮ್ಮ ವಕೀಲರು ಉತ್ತರ ನೀಡಿದ್ದಾರೆ ಎಂದು ನುಡಿಯುತ್ತಾರೆ.

64. ಸದರಿ ನೊಟೀಸು ಬಂದ ನಂತರ ಖುದ್ದು ಪೊಲೀಸ್ ಠಾಣೆಗೆ ಹಾಜರಾಗಿಲ್ಲ.

65. ನೀವು ಬಿ.ಪಿ.ಎಲ್ ಪಡಿತರ ಕಾರ್ಡ್ ಹೊಂದಿದ್ದೀರಾ ಎಂದರೆ, ನನಗೆ ಯಾವುದೇ ಪಡಿತರ ಕಾರ್ಡ್ ಇಲ್ಲ ಎಂದು ನುಡಿಯುತ್ತಾರೆ.

66. ನಿಪಿ - 1 ನ್ನು ಯಾವುದೇ ಸಾಲ ಮರುಪಾವತಿಗಾಗಿ ಆರೋಪಿ ನೀಡಿಲ್ಲ ಎಂದರೆ ಸರಿಯಲ್ಲ.

67. ನಿಪಿ -1 ರಲ್ಲಿ ಆರೋಪಿಯ ಬರವಣಿಗೆ ಇಲ್ಲ ಎಂದರೆ, ಅವರೇ ಬರೆದು ನೀಡಿರುತ್ತಾರೆ ಎಂದು ನುಡಿಯುತ್ತಾರೆ.
68. ನಿಪಿ -1 ಆರೋಪಿ ಮತ್ತು ನವೀನ ಎಂಬುವವರು ಜಂಟಿ ಖಾತೆಯಲ್ಲಿ ಇದೆ ಎಂದರೆ, ನನಗೆ ಗೊತ್ತಿಲ್ಲ.
69. ನ್ಯಾಯಾಲಯದ ಮುಂದೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ